Ex.2/2018 /2018 R.W.1

ದಿನಾಂಕ 11.01.2022 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

ಪಾಟೀ ಸವಾಲುಃ DHR ಪರ ಮಾನ್ಯ ಶ್ರೀ GMV ವಕೀಲರಿಂದಃ

ನಾವು ಮನೆ ಕಟ್ಟಿರುವ ಆಸ್ತಿಯನ್ನು ಲಕ್ಷ್ಮಿಬಾಯಿ ಎನ್ನುವವರಿಂದ ಖರೀದಿ ಮಾಡಿರುತ್ತೇವೆ. ಲಕ್ಷ್ಮಿಬಾಯಿ ತೀರ್ಪು ಋಣಿ ರವರ ತಾಯಿ. Dhr ರವರು ಅವರ ಜಾಗ ಮತ್ತು ನಾವು ಮನೆಯನ್ನು ಕಟ್ಟಿರುವ ಜಾಗವನ್ನು ಸೇರಿಸಿ ಅಸಲು ದಾವಾ ಸಂಖ್ಯೆ 23/2012 ರಲ್ಲಿ ಶಾಶ್ವತ ನಿರ್ಬಂಧಕಾಜ್ಞೆಯನ್ನು ಪಡೆದುಕೊಂಡಿರುತ್ತಾರೆ ಎಂದರೆ ಅವರು ನಮ್ಮ ಜಾಗಕ್ಕೆ ನಿರ್ಬಂಧಕಾಜ್ಞೆಯನ್ನು ಪಡೆದುಕೊಂಡಿರುವುದಿಲ್ಲ. Dhr ರವರು ನಿರ್ಬಂಧಕಾಜ್ಞೆಯನ್ನು ಪಡೆದುಕೊಂಡಿರುವ ಜಾಗದ ಪೂರ್ವಕ್ಕೆ ಹಿರಣಯ್ಯ ಶೆಟ್ಟಿ ರವರ ಜಮೀನು ಎಂದರೆ ನನಗೆ ಗೊತ್ತಿಲ್ಲ. ಪಶ್ಚಿಮಕ್ಕೆ ಮೇಧರ ಕೃಷ್ಣಪ್ಪ ರವರ ಜಾಗ ಎಂದರೆ ಸತೀಷ ರವರ ಮನೆ ಬರುತ್ತದೆ. ಸತೀಷ ರವರು ಮೇಧರ ಕೃಷ್ಣಪ್ಪ ರವರ ಮನೆಯಲ್ಲಿ ಇರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸತೀಷ ರವರು ವಾಸವಿರುವ ಜಾಗ ಯಾರಿಗೆ ಸಂಬಂಧಪಟ್ಟಿರುತ್ತದೆ ಎಂದು ನಾನು ನೋಡಿರುವುದಿಲ್ಲ. ಉತ್ತರಕ್ಕೆ ರಸ್ತೆ ಇರುತ್ತದೆ ಎಂದರೆ ಸರಿ. ದಕ್ಷಿಣಕ್ಕೆ ವೆಂಕಟೇಗೌಡ ರವರ ಜಾಗ ಇರುತ್ತದೆ.

ನಾವು ಮನೆ ಕಟ್ಟಿರುವ ಜಾಗದ ಪೂರ್ವಕ್ಕೆ ಲಕ್ಷ್ಮಿಬಾಯಿ ರವರ ಜಾಗ ಬರುತ್ತದೆ. ಲಕ್ಷ್ಮಿ ಬಾಯಿ ರವರಿಗೆ ನಮಗೆ ನೀಡಿದ ಜಾಗವನ್ನು ಸೇರಿಸಿ ಅವರಿಗೆ ಒಟ್ಟು ಎಷುಟ ಜಾಗ ಇರುತ್ತದೆ ಎಂದು ನನಗೆ ಗೊತ್ತಿಲ್ಲ. Dhr ಮತ್ತು ಅವರ ತಾಯಿಗೆ ಸೇರಿದ ಒಟ್ಟು ಜಾಗ ಎಷ್ಟು ಇರುತ್ತದೆ ಎಂದು ನನಗೆ ಹೇಳಲು ಆಗುವುದಿಲ್ಲ. ಲಕ್ಷ್ಮಿ ಬಾಯಿ ರವರು ನಮಗೆ ಕರಾರನ್ನು ಮಾಡಿಕೊಟ್ಟಿದ್ದು ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. Dhr ರವರು ಅವರು ಲಕ್ಷ್ಮಿಬಾಯಿ ರವರಿಂದ ಕ್ರಯಕ್ಕೆ ಪಡೆದ ಆಸ್ತಿಯನ್ನು ಸೇರಿಸಿ ನನ್ನ ಹಾಗೂ ಮಂಜೋಜಿ ರಾವ್ ಸೇರಿಸಿ ಡಿಕ್ರಿಯನ್ನು ಪಡೆದಿರುತ್ತಾರೆ ಎಂದರೆ ಸರಿಯಲ್ಲ. ನಮ್ಮ ಮನೆಯು ಮುನಿಸಿಪಾಲ್ ಜಾಗದಲ್ಲಿ ಇರುತ್ತದೆ. Dhr ರವರ ಜಾಗಕ್ಕೆ municipal assessment ಇರುವುದಿಲ್ಲ. ಅವರ ಜಾಗಕ್ಕೆ municipal assessment ಆಗಿರುವುದಿಲ್ಲ ಎಂದು ನಾನು ದಾಖಲೆಗಳನ್ನು ಪರಿಶೀಲನೆ ಮಾಡಿರುತ್ತೇನೆ. Dhr ರವರಿಗೆ ಸೇರಿದ assessment ನಂಬರ್ 542/541 ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಆಸ್ತಿಯನ್ನು ಲಕ್ಷ್ಮಿ ಬಾಯಿ ರವರು dhr ರವರಿಗೆ ದಿನಾಂಕ 27.11.2008 ರಂದು ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. 11 X 30 ಅಡಿ ಜಾಗ ಮತ್ತು ನಮಗೆ ಮಾರಾಟ ಮಾಡಿದದ್ದರು ಎಂದು ಹೇಳಿದ ಆಸ್ತಿಗೆ ಸಂಬಂಧಿಸಿದಂತೆ ಲಕ್ಷೀ ಬಾಯಿ ರವರು Dhr ರವರಿಗೆ ಕ್ರಯಪತ್ರ ಬರೆದುಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

ನಮ್ಮ ಮನೆಯ ಪೂರ್ವಕ್ಕೆ Dhr ರವರ ಮನೆ ಬರುತ್ತದೆ ಎಂದರೆ ಸರಿಯಲ್ಲ. Dhr ಮತ್ತು ಲಕ್ಷ್ಮಿ ಬಾಯಿ ರವರ ಜಾಗದ ನಡುವೆ ಬೇರೆ ಸರ್ಕಾರಿ ಜಾಗ ಇರುತ್ತದೆ ಎಂದು ತೋರಿಸಲು ನನ್ನ ಬಳಿ ದಾಖಲೆಗಳು ಇರುವುದಿಲ್ಲ. Dhr ಮತ್ತು ಲಕ್ಷ್ಮಿ ಬಾಯಿ ರವರ ಜಾಗದ ನಡುವೆ ಎಷ್ಟು ಅಡಿಯ ಜಾಗದ

ವ್ಯತ್ಯಾಸ ಇರುತ್ತದೆ ಎಂದು ನನಗೆ ಗೊತ್ತಿಲ್ಲ. ಲಕ್ಷ್ಮಮ್ಮ ರವರಿಗೆ ಸೇರಿದ ಜಾಗ ಎಷ್ಟು ಅಡಿ ಉದ್ದ ಅಗಲ ಇರುತ್ತದೆ ಎಂದು ನನಗೆ ಗೊತ್ತಿಲ್ಲ. ಲಕ್ಷ್ಮಮ್ಮ ರವರ ಜಾಗವನ್ನು Dhr ರವರಿಗೆ ಕೊಟ್ಟಿರುತ್ತಾರೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ. Dhr ಮತ್ತು ಲಕ್ಷ್ಮಮ್ಮ ರವರು ಅವರ ಮಧ್ಯ ವಿಭಾಗ ಮಾಡಿಕೊಂಡಿರುತ್ತಾರೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ. ಲಕ್ಷ್ಮಮ್ಮ ರವರ ಅಷ್ಟು ಜಾಗ ಅವರ ತಂದೆ ಮಂಜೋಜಿ ರಾವ್ ರವರಿಗೆ ಸೇರಿದ್ದಾಗಿತ್ತು ಎಂದರೆ ನನಗೆ ಗೊತ್ತಿಲ್ಲ. Dhr ಮತ್ತು ಲಕ್ಷ್ಮಮ್ಮ ರವರಿಗೆ ಸೇರಿದ ಆಸ್ತಿ ಹೇಗೆ ಬಂದಿರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ.

ಲಕ್ಷ್ಮಮ್ಮ ರವರ ಹೆಸರಿನಲ್ಲಿ ಖಾತೆ ಇರುವ ಬಗ್ಗೆ ನಾನು ಪರಿಶೀಲನೆ ಮಾಡಿ ನೋಡಿರುವುದಿಲ್ಲ. ಅದರ ಪಕ್ಕದಲ್ಲಿ ಪಂಚಾಯಿತಿ ಜಾಗ ಇರುತ್ತದೋ ಇಲ್ಲವೋ ಎಂದು ನಾನು ಪರಿಶೀಲನೆ ಮಾಡಿರುವುದಿಲ್ಲ. ಕೃಷ್ಣಮ್ಮ ಮತ್ತು Dhr ಮತ್ತು ಸತೀಷ ರವರ ಜಾಗದ ನಡುವೆ 16 x 80 ಅಡಿ ಜಾಗ ಇರುತ್ತದೆ. ಅದೇ ಜಾಗದಲ್ಲಿ ನಾನು ಮನೆಯನ್ನು ಕಟ್ಟಿರುತ್ತೇನೆ. ಸದರಿ ಜಾಗಕ್ಕೆ ಸಂಬಂಧಪಟ್ಟಂತೆ ನ್ಯಾಯಾಲಯದಿಂದ ನಿರ್ಬಂಧಕಾಜ್ಞೆ ಇರುವ ಬಗ್ಗೆ ನನಗೆ ಗೊತ್ತಿರುತ್ತದೆ ಎಂದರೆ ಸರಿಯಲ್ಲ. ಅಸಲು ದಾವಾ ಸಂಖ್ಯೆ 23/2002 ರಲ್ಲಿ ನಾನು ತಕರಾರು ಸಲ್ಲಿಸಿರುತ್ತೇನೆ ಎಂದರೆ ಸರಿ. ನಂತರ ಸದರಿ ದಾವೆಯಲ್ಲಿ ನಾನು ಸಾಕ್ಷಿಯನ್ನು ನುಡಿದಿರುತ್ತೆನೋ ಇಲ್ಲವೋ ಎಂದು ನನಗೆ ನೆನಪಿಲ್ಲ. ಅದೇ ದಾವೆಯಲ್ಲಿ ನಿರ್ಬಂಧಕಾಜ್ಞೆ ಆದೇಶ ಆಗಿದ್ದು ಅದರ ವಿರುದ್ಧ ನಾನು ಮೇಲ್ಮನವಿ ಸಲ್ಲಿಸಿರುವುದಿಲ್ಲ ಎಂದರೆ ಅದೇ ಜಾಗ ಬೇರೆ ಇದೇ ಜಾಗ ಬೇರೆ ಆದ ಕಾರಣನಾನು ಮೇಲ್ಮನವಿ ಸಲ್ಲಿಸಿರುವುದಿಲ್ಲ. ಮೊದಲು ನಾನು ಶೆಡ್ ಅನ್ನು ಕಟ್ಟಿಕೊಂಡಿದ್ದು ಅದೇ ಜಾಗಕ್ಕೆ ಅವರು ಕರಾರು ಪತ್ರ ವನ್ನು ಲಕ್ಷ್ಮಮ್ಮ ರವರು ಬರೆದುಕೊಟ್ಟಿರುತ್ತಾರೆ ದಾವಾ ಸ್ವತ್ತನ್ನು ಬಿಟ್ಟು ಲಕ್ಷ್ಮಮ್ಮ ರವರ ಹೆಸರಿನಲ್ಲಿ ಬೇರೆ ಆಸ್ತಿ ಇರುವ ಬಗ್ಗೆ ನಾನು ಪರಿಶೀಲನೆ ಮಾಡಿರುವುದಿಲ್ಲ, ಅವರು ನಾನು ಶೆಡ್ ಕಟ್ಟಿದ ಜಾಗಕ್ಕೆ ಕರಾರು ಪತ್ರ ಬರೆದುಕೊಟ್ಟ ಬಗ್ಗೆ ಮಾತ್ರ ಗೊತ್ತಿರುತ್ತದೆ.

ನಿಪಿ.57 ನ್ನು ತಪ್ಪಾಗಿ ಮಾಡಿರುತ್ತಾರೆ. ನಿಪಿ 57 ರ ಪ್ರಕಾರ ನನ್ನ ಭಾಗದ ಒಂದು ಭಾಗದ ಕಡೆ Dhr ರವರ ಜಾಗ ಬರುತ್ತದೆ ಎಂದರೆ ಸರಿಯಲ್ಲ. Dhr ರವರ ಜಾಗ ಈಗ ಖಾಲಿ ಇರುತ್ತದೆ ಅಲ್ಲಿ ಕಟ್ಟಡ ಇರುವುದಿಲ್ಲ. ನಮ್ಮ ಮನೆಯಿಂದ Dhr ರವರ ಜಾಗ 1-2 ಅಡಿ ದೂರದಲ್ಲಿ ಬರುತ್ತದೆ. Dhr ರವರು ಅವರ ಜಾಗದಲ್ಲಿ ಮೇಲಿನ ಮಹಡಿಯನ್ನು ಕಟ್ಟಿರುತ್ತಾರೆ. ನಮ್ಮ ಮನೆಯ ಕಾಂಪಾಂಡ್ ಒಳಗೆ ತೆಂಗಿನ ಮರ ಇರುವುದಿಲ್ಲ. Dhr ಮತ್ತು ನನ್ನ ಮನೆಯ ನಡುವೆ ಜಾಗದಲ್ಲಿ ತೆಂಗಿನ ಮರಗಳು ಇರುವುದಿಲ್ಲ.

ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿಯಾಗಿದೆ ಎಂದು ಒಪ್ಪಿರುತ್ತಾರೆ.

ಸಾಕ್ಷಿ ಸಹಿಃ

ಸಿವಿಲ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಧೀಶರು,
ನ.ರಾ. ಪುರ.